# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.92/2018

**P.W.-09**
**Addl. Witness**

| | | |
|---|---|---|
| ಹೆಸರು | : | ಫೈರೋಜ್ |
| ತಂದೆಯ ಹೆಸರು | : | ಮಹಮ್ಮದ್ ಷರೀಫ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ತೆಂಗಿನ ಕಾಯಿ ಸುಲಿಯುವುದದು |
| ವಾಸಸ್ಥಳ | : | ಗುಡಿಯತ್ತಮ್, ವೇಲೂರು, ತಮಿಳುನಾಡು |

ಸಾಕ್ಷಿಯನ್ನು ಸಿಆರ್ ಪಿಎಸ್ ಕಲಂ. **299** ರಡಿಯಲ್ಲಿ ವಿಚಾರಣೆ ಮಾಡಲಾಯಿತು.

ದಿನಾಂಕಃ **20-06-2019** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ -

ನಾನು 5 ನೇ ಆರೋಪಿಯನ್ನು ನೋಡಿರುತ್ತೇನೆ. ಉಳಿದ ಆರೋಪಿಗಳನ್ನು ನೋಡಿರುವುದಿಲ್ಲ. ಪೋಲೀಸನವರು ನನ್ನನ್ನು ಬರಮಾಡಿಕೊಂಡು ನನ್ನ ಸಮಕ್ಷಮ ಒಂಬತ್ತು ಉಂಗುರಗಳನ್ನು ಒಂದು ಪಂಚನಾಮೆಯ ಮುಖಾಂತರ ಅಮಾನತ್ತುಪಡಿಸಿಕೊಂಡರು. ನಾನು ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ-**38** ಹಾಗೂ ನಿಪಿ-38 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-38(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ 9 ಉಂಗುರಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಸದರಿ ಉಂಗುರಗಳನ್ನು ಈಗಾಗಲೇ ಮು.ಮಾ -18 ಎಂದು ಗುರುತಿಸಲಾಗಿದೆ. ಪೋಲೀಸರು ಸದರಿ ಉಂಗುರಗಳನ್ನು 5 ನೇ ಆರೋಪಿಯ ಮನೆಯಲ್ಲಿ ಅಮಾನತ್ತುಪಡಿಸಿಕೊಂಡರು. ಪೋಲೀಸರು ಸದರಿ ಮಹಜರನ್ನು ಬೆಳಗ್ಗೆ 9-00 ರಿಂದ 10-00 ರರೆಗೆ ಜರುಗಿಸಿದರು. ನಿಪಿ-38 ಕ್ಕೆ ನನ್ನೊಂದಿಗೆ ಖಲೀಮುಲ್ಲಾ ಎಂಬ ವ್ಯಕ್ತಿಯು ಸಹ ಸಹಿ ಮಾಡಿರುತ್ತಾನೆ. ಸದರಿ ಖಲೀಮುಲ್ಲಾ ಈಗ ಬದುಕಿಲ್ಲ.

**S.C.No.92/2018**
**P.W.-09**
**Addl witness**

ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ -

**2.** ಸಾಕ್ಷಿಯನ್ನು ಸಿಆರ್ ಪಿಎಸ್ ಕಲಂ.299 ರಡಿಯಲ್ಲಿ ವಿಚಾರಣೆ ಮಾಡಿರುವುದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆಃ ಇಲ್ಲಾ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.